ಓಎಸ್ : 14/2018

ಪಿಡಬ್ಲು:1 ಶ್ರೀಶೈಲಪ್ಪ ಬಾಗಿ

ದಿನಾಂಕಃ 05-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ವಾಟೀ ಸವಾಲು: ಪ್ರತಿವಾದಿ ನಂ.3 ರಿಂದ 17ರವರ ಪರ ವಕೀಲರಾದ ಶ್ರೀ.ಆರ ಜಿ ವಿ ವಕೀಲರಿಂದಃ**

1. ಈ ದಾವೆಯ ದಾವಾ ಜಮೀನು ಮೂಲತಃ ಬಳವಂತ ದೇಶಪಾಂಡೆ ಇವರ ಜಮೀನು ಎಂದರೆ ಸರಿಯಲ್ಲ. ದಾವಾ ಜಮೀನನ್ನು ಸದರಿ ದೇಶಪಾಂಡೆ ಅವರ ಕಡೆಯಿಂದ ಕರೆಯವ್ವ ಪೂಜಾರಿ ಎನ್ನುವವರು ಖರೀದಿಗೆ ತೆಗೆದುಕೊಂಡಿದ್ದರು ಎಂದರೆ ಸರಿ. ನಾವು ದಾವಾ ಆಸ್ತಿಯನ್ನು ಕರೆಯವ್ವ ಪೂಜಾರಿ ಅವರ ಕಡೆಯಿಂದ ಖರೀದಿಸಿದ್ದೇವೆ ಎಂದರೆ ಸರಿ. ಆ ರೀತಿ ಕರೆಯವ್ವ ಅವಳ ಕಡೆಯಿಂದ ಆ ಆಸ್ತಿಯನ್ನು ಖರೀದಿಸುವಾಗ ಅದು ಅವಳಿಗೆ ಹೇಗೆ ಬಂದಿತ್ತು ಎಂಬ ಬಗ್ಗೆ ನಾವು ದಾಖಲೆ ತೆಗೆಯಿಸಿ ನೋಡಿದ್ದೇವು.

2. ದೇಶಪಾಂಡೆ ಇವರ ಕಡೆಯಿಂದ ಕರೆಯವ್ವ ಪೂಜಾರಿ ಇವಳು ದಾವಾ ಆಸ್ತಿ ಖರೀದಿಸಿದ ಬಗ್ಗೆ ಅವಳ ಹೆಸರಿಗೆ ಆದ ಖರೀದಿ ಪತ್ರದಲ್ಲಿ ಚೆಕಬಂದಿಯನ್ನು ನಮೂದಿಸಿದ್ದರು ಎಂದರೆ ಸರಿ. ಅದರಲ್ಲಿ ನಮೂದಾದ ಪ್ರಕಾರ ಪೂರ್ವಕ್ಕೆ ಸದರಿ ಆಸ್ತಿಯ ಉಳಿದ ಜಮೀನು, ಪಶ್ಚಿಮಕ್ಕೆ ನಾನಾಸಾಹೇಬ ನಲವಡೆ, ದಕ್ಷಿಣಕ್ಕೆ ಪದಮಂಡಿಗೆ ಹೋಗುವ ರಸ್ತೆ ಮತ್ತು ಅನಂತ ಡೊಂಬರಪೇಟ ಇವರ ಜಮೀನು ಮತ್ತು ಉತ್ತರಕ್ಕೆ ಕಟಕೋಳದಿಂದ ತೋರಗಲ್ಲ ರಸ್ತೆ ಎಂದು ನಮೂದಿಸಲಾಗಿದೆ ಎಂದರೆ ಸರಿಯಲ್ಲ. ಅದರಲ್ಲಿ ನಮೂದಾಗಿರುವ ವಿಷಯ ನನಗೆ ಗೊತ್ತಿದ್ದರು ಸಹ ನಮೂದು ಆಗಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದರಲ್ಲಿ ದಾವಾ ಆಸ್ತಿಯಲ್ಲಿ ರಸ್ತೆ ಇರುವ ಬಗ್ಗೆ ನಮೂದು ಇದ್ದರು ಸಹ ನಮೂದು ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ನಾವು ಕರೆಯವ್ವ ಪೂಜಾರಿ ಇವಳಿಂದ ದಾವಾ ಆಸ್ತಿಯ ಕುರಿತು ಮಾಡಿಕೊಂಡ ಖರೀದಿ ಪತ್ರದಲ್ಲಿ ಕ್ಷೇತ್ರವನ್ನು 2 ಎಕರೆ ಎಂದು ನಮೂದಿಸಲಾಗಿದೆ ಎಂದರೆ ಸರಿ ಆ ಕಾರಣ ನಾವು ಕರೆಯವ್ವ ಅವಳಿಂದ 2 ಎಕರೆ ಮಾತ್ರ ಜಮೀನು ಖರೀದಿಸಿದ್ದೇವು ಎಂದರೆ ಸರಿ. ಆ ರೀತಿ 2 ಎಕರೆ ಖರೀದಿಸಿದ ಜಮೀನು ಹೇಗೆ ಪಹಣಿ ಪತ್ರಿಕೆಯಲ್ಲಿ 4 ಎಕರೆ 17 ಗುಂಟೆ ನಿಮ್ಮ ಹೆಸರಿಗೆ ಖಾತೆ ಆಯಿತು ಎಂದು ಕೇಳಿದ್ದ ಪ್ರಶ್ನೆಗೆ ಸಾಕ್ಷಿಯು ಉಪವಿಭಾಗಾಧಿಕಾರಿಗಳು ಬೈಲಹೊಂಗಲ ಇವರು ಆ ಸರ್ವೆ ನಂಬರನಲ್ಲಿದ್ದ ಒಟ್ಟು ಖರಾಬ ಜಮೀನನ್ನು ಆ ಸರ್ವೆ ನಂಬರನ ವಹಿವಾಟುದಾರರಿಗೆ ಹಂಚಿಕೆ ಮಾಡಿದ್ದು ಆ ಕಾರಣ ನಮ್ಮ ಜಮೀನಿನ ಕ್ಷೇತ್ರವು ಸಹ ಹೆಚ್ಚಿಗೆ ಆಗಿ ಆ ಕುರಿತು ಪಹಣಿ ಪತ್ರಿಕೆ ನಮೂದು ಆಗಿರುತ್ತದೆ ಎಂದು ನುಡಿಯುತ್ತಾರೆ.

4. ಈ ದಾವೆ ಅಲ್ಲದೇ ಇದೇ ನ್ಯಾಯಾಲಯದಲ್ಲಿ ನಾನು ಮರಾಠ ಸಮಾಜದವರ ವಿರುದ್ಧ ಅಸಲು ದಾವಾ ನಂ.270/2024ನೇದ್ದನ್ನು ದಾಖಲಿಸಿದ್ದೇನೆ ಎಂದರೆ ಸರಿ. ಆ ದಾವೆಯನ್ನು ಮೂಲತಃ ನಾನು ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಹೂಡಿದ್ದು ಆದರೆ ಅದು ಕೇವಲ ಶಾಶ್ವತ ನಿರ್ಭಂದಕಾಜ್ಞೆಯ ದಾವೆ ಆಗಿದ್ದರಿಂದ ಆ ದಾವೆಯನ್ನು ಈ ನ್ಯಾಯಾಲಯಕ್ಕೆ ವರ್ಗಾಯಿಸಲಾಗಿದೆ ಎಂದರೆ ಸರಿ.

5. ನಾನು ದಾವಾ ಆಸ್ತಿಯನ್ನು ಸನ್ 1985 ರಲ್ಲಿ ಕರೆಯವ್ವ ಪೂಜಾರಿ ಇವಳ ಕಡೆಯಿಂದ ಖರೀದಿಸಿದಾಗಿನಿಂದ ಸನ್ 2018 ರವರೆಗೂ ದಾವಾ ಆಸ್ತಿಯ ಕುರಿತು ಯಾರ ವಿರುದ್ಧವು ನಾನು ದಾವಾ ದಾಖಲಿಸಿಲ್ಲ ಎಂದರೆ ಸರಿ. R.S.No.347 ನೇದ್ದರಲ್ಲಿ ಮರಾಠ ಸಮಾಜದ ಸ್ಮಶಾನ ಮತ್ತು ಸಾರ್ವಜನಿಕ ರಸ್ತೆ ಇತ್ತು ಮತ್ತು ಅವುಗಳನ್ನು ಸಾರ್ವಜನಿಕರು ನಿರಂತರ ವಹಿವಾಟು ಮಾಡಿಕೊಂಡು ಬಂದಿದ್ದರು ಎಂದರೆ ಸರಿಯಲ್ಲ. ಆದರೆ ನಾನು ಕಾನೂನು ಬಾಹಿರವಾಗಿ ನಾನು ಖರೀದಿಸಿದ 2 ಎಕರೆಗೆ ಬದಲಾಗಿ ಆ ಖರಾಬ ಜಮೀನನ್ನು

ಸಹ ಸೇರಿಸಿ 4 ಎಕರೆ 17 ಗುಂಟೆ ಅಂತಾ ಉಪವಿಭಾಗಾಧಿಕಾರಿಗಳಿಂದ ಆದೇಶ ಮಾಡಿಸಿಕೊಂಡ ನಂತರ ಈ ಎಲ್ಲ ವಿವಾದಗಳು ಪ್ರಾರಂಭವಾಗಿರುತ್ತವೆ ಎಂದರೆ ಸರಿಯಲ್ಲ.

6. ಸದರಿ R.S.No.347 ನೇದ್ದರಲ್ಲಿ ಸಾರ್ವಜನಿಕ ಉಪಯೋಗಕ್ಕಾಗಿ ಖರಾಬ ವಿಸ್ತೀರ್ಣವು ಅಸ್ತಿತ್ವದಲ್ಲಿ ಇದ್ದರೂ ಸಹ ನಾನು ಕಂದಾಯ ಅಧಿಕಾರಿಗಳನ್ನು ಮಿಲಾಪಿ ಮಾಡಿಕೊಂಡು ಆ ಖರಾಬ ವಿಸ್ತೀರ್ಣವನ್ನು ಕಾನೂನು ಬಾಹಿರವಾಗಿ ಕಡಿಮೆ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

7. ದಾವಾ ಆಸ್ತಿಯಲ್ಲಿ ಎಂದಿಗೂ ರಸ್ತೆ ಇರುವುದಿಲ್ಲ ಎಂದು ತೋರಿಸಲು ನಾನು ದಾವಾ ಆಸ್ತಿಯ ಪೋಟೋಗಳನ್ನಾಗಲಿ ಅಥವಾ ದಾಖಲೆಗಳನ್ನಾಗಲಿ ಈ ದಾವೆಯಲ್ಲಿ ಹಾಜರಪಡಿಸಿಲ್ಲ ಎಂದರೆ ಸರಿಯಲ್ಲ. ಆ ರೀತಿ ಪೋಟೋಗಳನ್ನು ಹಾಜರಪಡಿಸಿದೆ ಇದ್ದರೂ ಸಹ ಹಾಜರಪಡಿಸಿದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

8. ದಾವಾ ಆಸ್ತಿಯಲ್ಲಿ ನಾನು ಬಿನ ಶೇತಕಿ ಪರಿವರ್ತನೆ ಮಾಡಿ 10 ಗುಂಟೆಯಲ್ಲಿ ಸನ್ 1986 ನೇ ಸಾಲಿನಿಂದ ಪೆಟ್ರೋಲ ಬಂಕ ಇರುತ್ತದೆ ಎಂದರೆ ಸರಿ. ಆ ಕಾರಣ ಆ ಪೆಟ್ರೋಲ್ ಬಂಕ ಸಿಬ್ಬಂಧಿಯು ಹಗಲು ಮತ್ತು ರಾತ್ರಿ ವೇಳೆಯಲ್ಲಿ ಅಲ್ಲಿಯೇ ಇರುತ್ತಾರೆ ಎಂದರೆ ಸಾಕ್ಷಿಯು ರಾತ್ರಿ ವಾಚಮನ ಮಾತ್ರ ಇರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಯರು ರಾತ್ರೋ ರಾತ್ರಿ ರಸ್ತೆ ನಿರ್ಮಿಸುತ್ತಿರುವ ಕುರಿತು ನಮ್ಮ ಬಂಕನ ವಾಚಮನ ನಮಗೆ ತಿಳಿಸಿದ್ದನು. ಆತನ ಹೆಸರು ಶಿವನಪ್ಪ ಪರೀಟ ಅಂತಾ ಇದ್ದು, ಆದರೆ ಆತನು ಈಗಾಗಲೇ ಮೃತಪಟ್ಟಿರುತ್ತಾನೆ. ಆತನು ಪೋನ ಮಾಡಿದಾಗ ನಾವು ಆತನಿಗೆ ಯಾರು ಆ ರೀತಿ ಹೊಸದಾಗಿ ರಸ್ತೆ ಮಾಡುತ್ತಿದ್ದಾರೋ ಆ ಕುರಿತು ಮೋಬೈಲನಲ್ಲಿ ಪೋಟೋ ತೆಗೆಯುವಂತೆ ಸೂಚನೆ

ಕೊಟ್ಟಿದ್ದೇನು ಮತ್ತು ಆ ಪ್ರಕಾರ ಆತನು ತೆಗೆದಿದ್ದ ಪೋಟೋಗಳನ್ನೆ ಈ ದಾವೆಯಲ್ಲಿ ಹಾಜರಪಡಿಸಿರುತ್ತೇನೆ. ದಾವೆಯಲ್ಲಿ ನಾನು ಹಾಜರಪಡಿಸಿರುವ ಪೋಟೋಗಳು ಹೊಸ ರಸ್ತೆ ನಿರ್ಮಾಣದ ಕುರಿತಾದ ಪೋಟೋಗಳು ಆಗಿರುವುದಿಲ್ಲ, ಬದಲಾಗಿ ರಸ್ತೆ ರಿಪೇರಿ ಮಾಡುತ್ತಿರುವ ಕುರಿತಾದ ಪೋಟೋಗಳು ಎಂದರೆ ಸರಿಯಲ್ಲ.

9. ನಮ್ಮ ಜಮೀನಿನ ದಕ್ಷಿಣ ದಿಕ್ಕಿಗೆ ಇರುವ ಡೊಂಬರಪೇಟ ಇವರ ಜಮೀನಿನಿಂದ ಮುಂದೆ ಡಾಂಬರ ರಸ್ತೆ ಆಗಿರುತ್ತದೆ ಎಂದರೆ ಸಾಕ್ಷಿಯು ಸರಿ ಎಂದು ಉತ್ತರಿಸುತ್ತಾರೆ. ಆ ಪ್ರಕಾರ ದಾವಾ ಜಮೀನಿನಲ್ಲಿಯೂ ಸಹ ಈ ಹಿಂದಿನಿಂದಲೂ ಇದ್ದ ರಸ್ತೆಯನ್ನು ಡಾಂಬರ ರಸ್ತೆಯಾಗಿ ಮಾಡಲು ಸರಕಾರದವರು ಮುಂದಾದಾಗ ನಾನು ಈ ಸುಳ್ಳು ದಾವೆಯನ್ನು ದಾಖಲಿಸಿ ಆ ಡಾಂಬರ ರಸ್ತೆ ನಿರ್ಮಾಣಕ್ಕೆ ಅಡ್ಡಿಪಡಿಸಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಜಿಲ್ಲಾ ಪಂಚಾಯತಿ ಅವರೆ ಆ ಕುರಿತು ಹಿಂಬರಹ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಜಿಲ್ಲಾ ಪಂಚಾಯತಿಗೆ ತಕರಾರು ಸಲ್ಲಿಸಿದ ಮೇರೆಗೆ ಮತ್ತು ದಾವಾ ಇರುವ ಕುರಿತು ಆಧರಿಸಿದ ಮೇರೆಗೆ ಆ ರೀತಿ ಹಿಂಬರಹ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

10. ದಾವಾ ಜಮೀನನಲ್ಲಿ ಪೂರ್ವಜರ ಕಾಲದಿಂದಲೂ ರಸ್ತೆ ಇದ್ದರೂ ಸಹ ಈಗ ನಾನು ಆ ಖರಾಬ ಜಮೀನನ್ನು ಕಡಿಮೆ ಮಾಡಿಸಿ ರಸ್ತೆ ಇಲ್ಲ ಎಂದು ಸುಳ್ಳು ಆಧರಿಸಿ ಈ ಸುಳ್ಳು ದಾವೆಯನ್ನು ಸಲ್ಲಿಸಿ ಈ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾರ್ವಜನಿಕ ಉಪಯೋಗಕ್ಕಾಗಿ ಹಿಂದಿನಿಂದಲೂ ಮೀಸಲಿಟ್ಟಿದ ಸರಕಾರಿ ಜಮೀನನ್ನು ನಾನು ಕಂದಾಯ ಅಧಿಕಾರಿಗಳನ್ನು ಮಿಲಾಪಿ ಮಾಡಿಕೊಂಡು ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ ಆ ಸರಕಾರಿ ಜಮೀನನ್ನು ಎತ್ತಿ ಹಾಕುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಓಎಸ್ : 14/2018

ಪಿಡಬ್ಲು:1 ಶ್ರೀಶೈಲಪ್ಪ ಬಾಗಿ

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ ಸರಿ ಇದೆ.

ದಿವಾಣಿ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ, ರಾಮದುರ್ಗ.